# ಓಪನ್‌ಎಐ ಬ್ರೌಸರ್!

**ಚಾಟ್‌ಜಿಪಿಟಿ ಮೂಲಕ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಚಲನ ಹುಟ್ಟಿಸಿರುವ 'ಓಪನ್‌ಎಐ' ಸಂಸ್ಥೆ, ಇದೀಗ ಗೂಗಲ್‌ನ ಕ್ರೋಮ್ ಮಾದರಿಯ ಬ್ರೌಸರ್ ರಚಿಸುವ ಕಾರ್ಯಕ್ಕೆ ಮುಂದಾಗಿದೆ.**

**■ ಶಶಿಕುಮಾರ್ ಸಿ.**







ಬ್ರೌಸರ್ ಲೋಕದಲ್ಲಿ ದೊಡ್ಡಣ್ಣನಂತೆ ಇಂದಿಗೂ ಮೆರೆಯುತ್ತಿರುವ ಕ್ರೋಮ್‌ಗೆ, 'ಓಪನ್‌ಎಐ ಬ್ರೌಸರ್' ಪ್ರಬಲ ಪ್ರತಿಸ್ಪರ್ಧಿಯಾಗುವ ಸಾಧ್ಯತೆ ಇದೆ. ಅಸಾಧಾರಣ ಸಾಮರ್ಥ್ಯದ ಎಐ ಆಧರಿತ ಚಾಟ್‌ಜಿಪಿಟಿಯೆಂಬ ದೈತ್ಯ ಶಕ್ತಿಯು ಈ ಬ್ರೌಸರ್ ಜೊತೆಗೆ ಸೇರಿ ಬರುರುವುದು ತಂತ್ರಜ್ಞಾನದ ಹೊಸ ಕ್ರಾಂತಿಗೆ ಮುನ್ನುಡಿಯಾಗುವ ಸಾಧ್ಯತೆಯಿದೆ.

ಜಗತ್ತಿನ ಬ್ರೌಸರ್ ಮಾರುಕಟ್ಟೆಯಲ್ಲಿ ಕ್ರೋಮ್‌ನ ಪಾರುಪತ್ಯ ಶೇಕಡ 63.87ರಷ್ಟಿದೆ. ಅಮೆರಿಕವೊಂದರಲ್ಲೇ ಇದರ ಬಳಕೆಯ ಪ್ರಮಾಣ ಶೇ. 49.45ರಷ್ಟಿದೆ. ಇಂತಹ ಹಿನ್ನೆಲೆ ಹೊಂದಿರುವ ಕ್ರೋಮ್, ಸಹಜವಾಗಿ ಬ್ರೌಸಿಂಗ್ ಕ್ಷೇತ್ರದಲ್ಲಿ ಏಕಸ್ವಾಮ್ಯ ಆಧಿಪತ್ಯ ಹೊಂದಿದೆ.

ಓಪನ್‌ಎಐ ಬ್ರೌಸರ್‌ಗೆ ಎಐ ಆಧರಿತ ಚಾಟ್‌ಜಿಪಿಟಿಯ ನೆರವಿರುವುದು ಪ್ರಬಲ ಅಸ್ತ್ರವಾಗಿದೆ. ಇದರ ಮೂಲಕ ಬ್ರೌಸರ್‌ನಲ್ಲಿ ನಿಖರ ಮಾಹಿತಿ ಒದಗಿಸಲಿದೆ. ಇದು ಕ್ರೋಮ್ ಮೇಲೆ ಹೆಚ್ಚಿನ ಒತ್ತಡ ಹೇರುವ ಸಾಧ್ಯತೆ ಇದೆ. ಹತ್ತಾರು ವರ್ಷಗಳಿಂದ ಒಂದೇ ಮಾದರಿಯ ಬ್ರೌಸರ್‌ಗೆ ಅಂಟಿಕೊಂಡಿರುವ ಇಂಟರ್‌ನೆಟ್ ಬಳಕೆದಾರರು ಹೊಸ ಮಾದರಿ ಬ್ರೌಸರ್‌ನತ್ತ ಮುಖ ಮಾಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಓಪನ್‌ಎಐ ಬ್ರೌಸರ್, ಬಳಕೆದಾರರು ಹುಡುಕುವ ವಿಷಯದ ಕುರಿತು ಜಾಲತಾಣಗಳಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಯನ್ನು ಬೆರಳತುದಿಗೆ ತಂದು ನೀಡಲಿದೆ. ಹೀಗೆ ಲಭ್ಯವಾಗುವ ಮಾಹಿತಿಯಲ್ಲಿ ಯಾವುದು ಸತ್ಯ, ಯಾವುದು ನಕಲಿ ಅನ್ನುವುದನ್ನೂ ಇದೇ ಪತ್ತೆಹಚ್ಚಲಿದೆ. ಇದಕ್ಕೆ ಈ ಬ್ರೌಸರ್ ಎಐ ತಂತ್ರಜ್ಞಾನವನ್ನು ಸ್ವಯಂಚಾಲಿತವಾಗಿ ಬಳಸಿಕೊಳ್ಳಲಿದೆ. ಹೀಗಾಗಿ ಗೂಗಲ್ ಕ್ರೋಮ್ ಏಕಸ್ವಾಮ್ಯ, ಪ್ರಾಬಲ್ಯ ಮುರಿಯುವ ಎಲ್ಲಾ ಸಾಧ್ಯತೆ ಇದೆ.

ಅಂತರರಾಷ್ಟ್ರೀಯ ಮಾಧ್ಯಮಗಳ ವರದಿ ಪ್ರಕಾರ ಸ್ಯಾಮ್ ಆಲ್ಟ್‌ಮನ್ ನೇತೃತ್ವದ ಓಪನ್‌ಎಐ ಕಂಪನಿಯು, ಈಗಾಗಲೇ ವೆಬ್ ಬ್ರೌಸರ್ ಲಾಂಚ್ ಮಾಡಲು ತಯಾರಿ ನಡೆಸಿದೆ. ಇದಕ್ಕಾಗಿ ಜಗತ್ತಿನ ಅತ್ಯುತ್ತಮ ಆ್ಯಪ್ ಡೆವಲಪರ್ಸ್, ವೆಬ್‌ಸೈಟ್ ಡೆವಲಪರ್ಸ್, ಕಾಂಡೆ ನಾಸ್ಟ್ (Conde Nast), ರೆಡ್‌ಫಿನ್ (Redfin), ಈವೆಂಟ್‌ಬ್ರೈಟ್ ಹಾಗೂ ಪ್ರೈಸ್‌ಲೈನ್ (Priceline) ಡೆವಲಪರ್ಸ್ ಕಂಪನಿಗಳ ಜೊತೆಗೆ ಮಾತುಕತೆ ನಡೆಸಿದೆಯಂತೆ. ಚಾಟ್‌ಜಿಪಿಟಿ ಮೂಲಕ ವಿಶ್ವದ ಗಮನಸೆಳೆದ ಓಪನ್‌ಎಐ ಇದೀಗ ಅದೇ ಎಐ ತಂತ್ರಜ್ಞಾನದ ನೆರವಿಂದ ಹೊಸ ಕ್ರಾಂತಿಯನ್ನು ಸೃಷ್ಟಿಸಲು ಮುಂದಾಗಿದೆ. ■



ಎಕ್ಸ್‌ಮೇಲ್‌ನ ಕಾನ್ಸೆಪ್ಟ್ ಲೋಗೊ

# ಎಕ್ಸ್‌ಮೇಲ್ ಎಲಾನ್ ಸುಳಿವು

ಜಿಮೇಲ್‌ಗೆ ಪ್ರಬಲ ಪ್ರತಿಸ್ಪರ್ಧಿಯ ಸುಳಿವು ಸಿಕ್ಕಿದ್ದು, ಜಿಮೇಲ್‌ಗೆ ಪರ್ಯಾಯವೆಂಬಂತೆ ಹೊಸ ಇಮೇಲ್ ಪರಿಚಯಿಸುವುದಾಗಿ ಟೆಕ್ ಉದ್ಯಮಿ ಎಲಾನ್ ಮಸ್ಕ್ ಸುಳಿವು ನೀಡಿದ್ದಾರೆ. ಎಕ್ಸ್ ಬಳಕೆದಾರರೊಬ್ಬರು ಹುಟ್ಟುಹಾಕಿದ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಎಲಾನ್, 'ಹೊಸ ಇಮೇಲ್ ಪರಿಚಯಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದು, ಶೀಘ್ರ ಎಕ್ಸ್‌ಮೇಲ್ ಪರಿಚಯಿಸಲಿದ್ದೇವೆ' ಎಂದಿದ್ದಾರೆ.



ತಮ್ಮ ಟೆಕ್ ವೇದಿಕೆಗಳೆಲ್ಲದರಲ್ಲೂ ಅತ್ಯಾಧುನಿಕ ಫೀಚರ್‌ಗಳನ್ನು ಕಲ್ಪಿಸಿರುವ ಎಲಾನ್, ಎಕ್ಸ್‌ಮೇಲ್‌ನಲ್ಲೂ ಅದೇ ಪರಿಪಾಟವನ್ನು ಮುಂದುವರೆಸಲಿದ್ದಾರೆ ಎಂಬ ನಿರೀಕ್ಷೆಯಿದೆ. ಅಲ್ಲದೇ ಈ ಮೇಲ್ ಮಿಕ್ಕೆಲ್ಲ ಇಮೇಲ್ ಸಂಸ್ಥೆಗಳಿಗಿಂತಲೂ ಕೂಲ್ ಆಗಿರಲಿದೆ ಎಂದು ಸ್ವತಃ ಮಸ್ಕ್ ಹೇಳಿದ್ದಾರೆ.

ಮುಂಚೂಣಿಯ ಸರ್ಚ್ ಎಂಜಿನ್ ಆಗಿರುವ ಗೂಗಲ್‌ನ ಸಹ ವೇದಿಕೆಯಾಗಿರುವ ಜಿಮೇಲ್ ಕಾರ್ಪೊರೇಟ್ ಜಗತ್ತಿನಲ್ಲಿ ಅತ್ಯಧಿಕವಾಗಿ ಬಳಕೆಯಾಗುತ್ತಿದೆ. ಪ್ರಪಂಚದಾದ್ಯಂತ ಆ್ಯಪಲ್ ಮೇಲ್ ಹೆಚ್ಚು ಬಳಕೆಯಾಗುತ್ತಿದ್ದು, ಸೆಪ್ಟೆಂಬರ್ 2024ರವರೆಗಿನ ವರದಿಯೊಂದರ ಪ್ರಕಾರ ಜಗತ್ತಿನಾದ್ಯಂತ ಶೇ. 53.67ರಷ್ಟು ಬಳಕೆಯಲ್ಲಿದೆ. ನಂತರದ ಸ್ಥಾನದಲ್ಲಿ ಜಿಮೇಲ್ ಇದ್ದು, ಇದನ್ನು ಶೇ. 30.70 ಬಳಕೆದಾರರು ಬಳಸುತ್ತಿದ್ದಾರೆ. ಮಿಕ್ಕಂತೆ ಔಟ್‌ಲುಕ್, ಯಾಹೂ ಮೇಲ್‌ಗಳು ನಂತರದ ಸ್ಥಾನಗಳನ್ನು ಪಡೆದಿವೆ. ■